೧೩

ಕಿತ್ತೆಸೆದ ಲತೆಯಂತೆ ಅತ್ತಿಮಬ್ಬೆ ಸೊರೆಗಿದಳು. ಅಪಸ್ಮಾರ ಬಂದವಳಂತೆ ಮಂಕಾದಳು. ನೀರಿಂದ ತೆಗೆದೊಗೆದ ಮೀನಿನಂತೆ ಈಕೆ ಸತ್ತೆನೋ ಬದಿಕಿದೆನೊ ಎಂದು ವಿಲಿವಿಲಿ ಒದ್ದಡಿದಳು. ಬಲವಂತವಾಗಿ ಊಟ ಮಾಡಿಸಬೇಕಾಯುತು. ಬಲವಂತವಾಗಿ ಸ್ನಾನ ಮಡಿಸಬೇಕಾಯಿತು. ಎಲ್ಲಕ್ಕೂ ಬಲವಂತ. ಆಕೆಗೆ ಲೋಕವೇ ಶೂನ್ಯವಾಯಿತು. ತಲೆ ಕಂತೆ ಬಂತೆಯಾಗಿ ಮಂದಾರವಿಲ್ಲದೆ ಅಂದಗೆಟ್ಟಿತು !ಕೆನ್ನೆ ಮಕರಿಕಾ ಪತ್ರವಿಲ್ಲದೆ ಬಣಬಣಗೊಂಡಿತು. ಪೆರೆನೊಸಲು ಕುಂಕುಮವಿಲ್ಲದೆ ಮಂಕಾಯಿತು. ಕೊರಳು ಮಂಗಳಸೂತ್ರವಿಲ್ಲದೆ ಹಾಳುದೇಗಲದಂತಾಯಿತು. ಕೈಬಳೆಯನ್ನು ಸಿಡಿಸಿದರು. ನಳಿತೋಳುಗಳು ಮರಕ್ಕೆ ಅಂಟಿದ ಬದನಿಕೆಯಾದವು ! ಸೆಳ್ಳುಗುರು ಕೊಳೆತುಂಬಿಕೊಂಡು ನೋಡುವುದಕ್ಕಾಗದಂತಾಯಿತು. ಹಿಂದೆಲ್ಲ ಆಕೆಯ ರೂಪು ಕಾಮನ ಬಿಲ್ಲನ್ನು ಕಡೆದಂತೆ ಕಂಗೊಳಿಸುತ್ತಿತ್ತು. ಈಗಾದರೋ ಅಂತರಗಂಗೆ ತುಂಬಿ ನಾರುವ ಹಾಳಾಬಾವಿಯಂತೆ ಈಕೆಯ ದೇಹ ಮಲಿನವಾಗಿ ಮ್ಲಾನತೆಯನ್ನು ತುಂಬಿಕೊಂಡು ವಿರೂಪವಾಯಿತು ! ನಿದ್ರೆ ಹತ್ತದಂತಾಗಿ ಹಗಲು ರಾತ್ರಿ ಎರಡೂ ಆಕೆಯ ಪಾಲಿಗೆ ನರಕದ ನರಳಾಟವಾಯಿತು. ಸಾಯುವುದಕ್ಕೂ ಸ್ವಾತಂತ್ರ್ಯವಿಲ್ಲವಲ್ಲ ಎಂದು ತಳುವಳಿಸಿದಳು. ಆಗಾಗ ಕೂಸು ತಾಯನ್ನರಸಿಕೊಂಡು ಬಂದು ಬತ್ತಿದ ಎದೆಗೆ ಬಾಯಿಹಾಕಿ ನಿರಾಶೆಗಿಳ್ಳುವುದು. ಕೊರಡಿನಂತೆ ಬಿದ್ದಿರುವ ತಾಯನ್ನು ಅತ್ತ ಇತ್ತ ಅಲುಗಾಡಿಸುವುದು. ಮೈಯೆಲ್ಲ ಮುಟ್ಟಿ ನೋಡುವುದು. ಅತ್ತಿಮಬ್ಬೆಗೆ ಜಗತ್ತೇ ಬೇಡವಾಯಿತು.

"ಅತ್ತಿ, ಮಗುವನ್ನಾದರೂ ಮಾತಾಡಿಸಬಾರದೆ ? ಅದು ಮತ್ತೆ ಮತ್ತೆ ತಾಯಿ ಬಳಿ ಸುಳಿದು ನಿರಾಶೆಗೊಳ್ಳಬೇಕೆ ?" ಎಂದು ಪದ್ಮಬ್ಬೆ ಸಂಕಟದಿಂದ ಮಾತಾಡಿದಳು.

"ನನ್ನನ್ನು ಇರುವುದಕ್ಕೂ ಬಿಡುವುದಿಲ್ಲ ,ಸಾಯೋಣವೆಂದರೆ ಅದಕ್ಕೂ ಅಡ್ಡಿ !" ಎಂದು ಅತ್ತಿಮಬ್ಬೆ ಸಿಡುಕಾದಳು.

"ನೀನಿರುವುದು ನಮಗೆ ಬೇಡವಾಗಿದೆಯೇ ? ಎಂಥ ಮಾತಾಡುವೆ ಮಗು. ಅತ್ತು ಕರೆದು ನಾವೇ ನಿನ್ನನ್ನು ನಿಲ್ಲಿಸಿಕೊಂಡೆವಲ್ಲ. ನಮಗಾಗಿ ನೀನಿರದಿದ್ದರೂ ಮಗುವಿಗಾದರೂ ಇರಬೇಡವೆ ?"

"ನನ್ನ ಪಾಡಿಗೆ ನನ್ನನ್ನು ಬಿಟ್ಟುಬಿಡಿ. ಯಾವ ಸುಖಕ್ಕೋಸರ ಬದುಕಬೇಕಾಗಿದೆ ?"

ಅತ್ತೆ, ಎದ್ದು ಅಣ್ಣಿಗನನ್ನು ನೋಡು. ಬಿರುಗಾಳಿಗೆ ಬುಡಮೇಲಾಗಿ ನೆಲಕ್ಕುರುಳಿದ ಮರದಲ್ಲಿ ಚಿಗುರೆಲ್ಲ ತಾರಾಗುವಂತೆ ಅಣ್ಣಿಗನೂ ದಿನೇದಿನೇ ಬಡವಾಗುತ್ತಿರುವನು. ನಮ್ಮ ವಂಶಕ್ಕೆ ಉಳಿದಿರುವ ಈ ಕುಡಿಯೊಂದನ್ನಾದರೂ ಸರಿಯಾಗಿ ನೋಡಿಕೊಳ್ಳದೇ ಹೋದರೆ ಏನು ಗತಿ ?" ಎಂದು ಪದ್ಮಬ್ಬೆ ಚಿಂತಾಕ್ರಾಂತಳಾದಳು.

"ಅಬ್ಬೆ, ಅಬ್ಬೆ" ಎಂದು ಅಣ್ಣಿಗೆ ತನ್ನ ತಾಯನ್ನು ಹಿಡಿದು ಅಲುಗಾಡಿಸಿತು.

"ಅತ್ತಿಮಬ್ಬೆ, ಮುಗುವನ್ನು ನೋಡಿದರೆ ನನ್ನ ಕರುಳು ನಿಳಿಚಿದಂತಾಗುವುದು ತಾಯಿ. ಮಗನನ್ನೂ ಕಳೆದುಕೊಂಡಿರುವೆವು. ಮೊಮ್ಮ ಗನನ್ನಾದರೂ ಜೋಪಾನಮಾಡ ಬೇಕಲ್ಲ" ಎಂದು ಕಂಬನಿ ಮಿಡಿದಳು.

"ಅತ್ತೆ ,ನಾನು ಇದ್ದೂ ಪ್ರಯೋಜನವೇನು ?ವಿಧವೆಯಾಗಿ ಸಮಾಜದಲ್ಲಿ ಇದ್ದರೂ ಒಂದೇ ಹೋದರೂ ಒಂದೆ. ದೇವರಿಗಿಲ್ಲ ದಿಂಡರಿಗಿಲ್ಲ. ಅಮಂಗಳದ ಕುರುಹಾಗಿ ಕುದಿಯುತ್ತಿರಬೇಕು. ಬಾಳೆಲ್ಲ ಬವಣೆ ಪಡಬೇಕು. ನಮ್ಮ ಗುಂಡು ಪುಣ್ಯಾತ್ಮಳು. ಸತ್ತು ಸ್ವರ್ಗಕ್ಕೆ ಹೋದಳು. ನಾನು ಇದ್ದೂ ನರಕವನ್ನು ಅನುಭವಿಸ ಬೇಕಾಗಿದೆ. !" ಎಂದು ಅತ್ತಿಮಬ್ಬೆ ಮಮ್ಮಲ ಮರುಗಿದಳು.

"ನಿನ್ನ ಜೊತೆಯಾಗಿ ನಾವೆಲ್ಲ ಇಲ್ಲವೇ ಅತ್ತಿ. ಮಗನಿಲ್ಲದ ಲೋಕದಲ್ಲಿ ಬದುಕಲು ಯಾರಿಗೆ ಆಶೆಯಿರುವುದು ?ನಿನಗಾಗಿ, ನಿನ್ನ ಮಗುವಿಗಾಗಿ ನಾವು ಉಳಿದಿರುವೆವು. ಅಣ್ಣಿಗನಿಗಾಗಿ ನಾವೆಲ್ಲ ಬಾಳಬೇಕು. ಯಾರ ಮಾತು ಹೇಗದರೂ ಇರಲಿ ನೀನು ಅಣ್ಣಿಗನ ತಾಯಿ ! ಮರವೇ ತನ್ನ ಫಲವನ್ನು ತಿನ್ನಲು ಹೊರಟರೆ ಗತಿ ಏನು ? ನೀನೇ ಹೆತ್ತ ಕೂಸನ್ನು ಇದ್ದರೆ ಇರಲಿ ಹೋದರೆ ಹೋಗಲಿ ಎಂದು ಅಲಕ್ಷ್ಯ ಮಾಡಿದರೆ ಲೋಕ ಏನಂದೀತು ?" ಎಂದು ಪದ್ಮಬ್ಬೆ ತನ್ನ ಸೊಸೆಯ ಗಮನವನ್ನು ಕರ್ತವ್ಯದ ಕಡೆ ಸೆಳೆದಳು.

ಒಂದೆರಡು ದಿನ ಕಳೆಯಿತು. ಪಂಪಕವಿ ವಿಜಯಪುರಕ್ಕೆ ಬಂದನು. ತನ್ನ ಸಂತಾಪವನ್ನು ಕಂಬನಿ ಸುರಿಸಿ ವ್ಯಕ್ತಪಡಿಸಿದನು. ದಲ್ಲಪನಿಗೆ ಯಾರು ಸಮಾಧಾನ ಮಾಡಲು ಬಂದರೂ ಸಂಕಟ ಮರುಕಳಿಸುತ್ತಿತ್ತು.

"ಪಂಪದೇವ, ನಮ್ಮನಾಗು ನಿಮ್ಮ ವಿಕ್ರಮಾರ್ಜುನ ವಿಜಯವನ್ನು ಕಂಠಪಾಠ ಮಾಡಿದ್ದನು. 'ಸಾಹಸದ ಮಹಿಮೆಯೊಳ್ ಫಲ್ಗುಣಂ !' ಎಂಬ ತಮ್ಮ ವಾಕ್ಯವನ್ನು ಬಾಳಿಗೆ ಆದರ್ಶವಾದ ಬೀಜಮಂತ್ರವೆಂದು ಅವನು ಭಾವಿಸಿದ್ದನು. ಆದಿಪುರಾಣವೂ ನಮ್ಮ ಹುಡುಗನಿಗೆ ಕರತಲಾಮಲಕವಗಿತ್ತು. ಬಾಹುಬಲಿಯ ಪಾತ್ರವನ್ನು ಮತ್ತೆ ಮತ್ತೆ ಅವಲೋಕಿಸಿ ತಾನೂ ಅವನಂತೆ ಆಗಬೇಕೆಂದು ಮನಸ್ಸುಮಾಡಿದ್ದನು. ಒಟ್ಟಿನಲ್ಲಿ ಅಂಥವರಿಗೆ ಆಯಸ್ಸು ಕಡಿಮೆ !" ಎಂದು ದಲ್ಲಪಸತ್ತಮಗನನ್ನು ಕೊಂಡಾಡಿ ಸಂಕಟಪಟ್ಟನು.

ದಲ್ಲಪ, ಸಾವು ಬದುಕು ಎರಡಕ್ಕಿಂತ ಕೀರ್ತಿ ದೊಡ್ಡದು. ಎಷ್ಟೋ ಜನ ಇದ್ದಾಗಲೆ ಸತ್ತಿರುತ್ತಾರೆ, ಅಂಥವರು ಇದ್ದರೂ ಒಂದೆ ಹೋದರು ಒಂದೇ ಎಂದು ಲೋಕವೂ ತಿಳಿದಿರುತ್ತದೆ. ತಮ್ಮ ಮಗು ಸತ್ತಮೇಲೂ ಬದುಕಿರುವನು ! ಹತ್ತಾರು ಜನ ಕವಿಗಳು ನಾಗದೇವನ ಸಾಹಸಕ್ಕೆ ಮಾರುಹೋಗಿ ಬಣ್ಣಿಸದಿರರು. ನಾಗದೇವನ ಸಹೃದಯತೆ ಯನ್ನು ಮುಂಬರುವ ಲೇಖಕರು ಕೊಂಡಾಡಿ ಕವಿತೆ ಕಟ್ಟುವರು, ಕಥೆ ಬರೆಯುವರು. ನೂರುವರ್ಷ ಲೋಕ ಮೆಚ್ಚದ ರೀತಿ ಬಾಳುವುದಕ್ಕಿಂತ ಲೋಕಮೆಚ್ಚುವಂತೆ ಎಷ್ಟುದಿನ ಬಾಳಿದರೆ ಅಷ್ಟೇ ಸಾಕು. ತಮ್ಮ ಮಗ ಅಮರನಾಗಿರುವನು !" ಎಂದು ಪಂಪ ಆತನನ್ನು ಸಮಾಧಾನ ಮಾಡಿದನು.

"ಪಂಪದೇವ ,ನಮ್ಮ ಪಾಡು ಹೇಗೋ ಆಗುವುದು. ಹಣ್ಣೆಲೆ ಏನಾದರೇನಂತೆ ? ಆದರೆ ಅತ್ತಿಮಬ್ಬೆಯನ್ನು ಸಮಾಧಾನಮಾಡಲು ಯಾರ ಕೈಲೂ ಆಗಿಲ್ಲ .ಅರೆಹುಚ್ಚಿಯಾಗಿ ಹೋಗಿದ್ದಾಳೆ ! ಅನ್ನ ನೀರು ನಿದ್ರೆ ಮೂರನ್ನೂ ಬಲವಂತವಾಗಿ ಕೊಡಬೇಕಾಗಿದೆ. ತಾವು ಮಹಾತ್ಮರು. ರಸಋಷಿಗಳು. ದೇವಲೋಕದಿಂದ ಭೂಲೋಕದ ತನಕ ತಮ್ಮ ಗಮನಕ್ಕೆ ಬೀಳದ ವಸ್ತುವೇ ಇಲ್ಲ. ತಾವು ಮನಸ್ಸು ಮಾಡಿದರೆ ಕಲ್ಲನ್ನೂ ಮಾತಾಡಿಸುವಿರಿ ! ಕಗ್ಗಲ್ಲಿನಲ್ಲೂ ಜೀವ ತುಂಬಿ ಲವಲವಿಕೆ ಬರುವಂತೆ ಮಾಡಬಲ್ಲಿರಿ ! ಏನಾದರೂ ಮಾಡಿ ನಮ್ಮ ಅತ್ತಿಮಬ್ಬೆಯನ್ನು ವಾಸ್ತವಿಕೆ ಪ್ರಪಂಚಕ್ಕೆ ಎಳೆದು ತರಬೇಕು" ಎಂದು ದಲ್ಲಪ ನಿಸ್ಸಹಾಯಾನಾಗಿ ಅಂಗಲಾಚಿದನು.

ಪಂಪಕವಿ ಅತ್ತಿಮಬ್ಬೆಯನ್ನು ಕಂಡನು. ಖೇಚರ ಕನ್ನೆಯಂತಿದ್ದ ಆಕೆ ಈಗ ತಲೆ ಕೆದರಿಕೊಂಡು ವಿಕಾರವಾಗಿ ಕಾಣುತ್ತಿದ್ದಳು. ದೊಡ್ಡವರು ಬರಲಿ ಚಿಕ್ಕರು ಬರಲಿ ಆಕೆ ತನ್ನ ಪಾಡಿಗೆ ತಾನು ತನ್ನ ಲೋಕದಲ್ಲೇ ಮಲಗಿರುತ್ತಿದ್ದಳು. ಬಾಳೇ ಬೇಕಿಲ್ಲ ದಂತಾದಾಗ ಯಾರಿಂದ ಏನಾಗಬೇಕು ?

"ಅಬ್ಬೆ, ಅಬ್ಬೆ ನಾನು ಪಂಪ" ಎಂದು ಆಕೆಯನ್ನು ನಮ್ಮಿಸಿದನು.

"ಮಗು, ಅದುದು ಆಗಿ ಹೋಯಿತು ! ಹೋದವರೆಲ್ಲ ಪುಣ್ಯಾತ್ಮರು ! ಆಯಸ್ಸು ತೀರಿದ ಮೇಲೆ ಯಾರು ಏನು ಮಾಡಬಲ್ಲರು ?ಏಳು ನನ್ನ ಕಂದ" ಎಂದು ಮಹಾಕವಿ ಮನಕರಗುವಂತೆ ನುಡಿದನು.

"ಮಾವ, ಊರೆಲ್ಲ ಬೆಂದಮೇಲೆ ಬಂದಿರುವೆ !ನಾನು ಎಷ್ಟು ದಿನ ಅಂತ ಯಾರಿಗೂ ಬೇಡದ ಬಾಳನ್ನು ಬಾಳಿಕೊಂಡಿರಲಿ ಮಾವ ! ಅರಿಕೇಸರಿ ಸತ್ತಾಗ ನೀನೂ ಅಳುತ್ತಿದ್ದೆ. ನಾನು ಸಮಾಧಾನ ಮಾಡಲು ಪ್ರಯತ್ನಿಸುತ್ತಿದ್ದೆ ! ಈಗ ನನಗೆ ಅರ್ಥ ವಾಯಿತು ಮಾವ ನನ್ನ ಸಂಕಟವನ್ನು ಈ ಲೋಕದಲ್ಲಿ ಯಾರೂ ಪರಿಹರಿಸಲಾರರು. ಬಂದವರೆಲ್ಲ ಒಂದೇ ರೀತಿ ಒಣ ಸಮಾಧಾನ ಮಾಡುವರು ! ಮಾವ, ನೀನು ಮಹಾ ಕವಿ !ನನಗೂ ಬಾಳುಲು ಅಧಿಕಾರವಿದೆಯೆ ? ಕವಿಯಾಗಿ ಹೇಳು ಮಾವ !" ಎಂದು ಅತ್ತಿಮಬ್ಬೆ ಗೋಳಾಡಿದಳು.

"ಅಬ್ಬೆ, ಬಾಳಿಗೆ ಅನೇಕ ಮುಖಗಳಿವೆ. ಗಂಡ, ಮಕ್ಕಳು ಒಂದು ಮುಖ ಅಷ್ಟೆ ! ನೀನು ಗಂಡನನ್ನು ಮಾತ್ರ ಕಳೆದುಕೊಂಡಿರುವೆ. ಉಳಿದೆಲ್ಲ ಮುಖಗಳೂ ನಿನಗಾಗಿ ಕಾದಿವೆ. ಚಿನು ಮಾಡಬೇಕಾದ ಕಾರ್ಯ ಬೆಟ್ಟದಷ್ಟಿದೆ. ಆರ್ತಧ್ಯಾನವೆಸಗಿ ನರಕಕ್ಕಿಳಿಯ ಬಾರದು. ಮಳೆಯ ನೀರಿಗೆ ಅಂಜಿ ಹೊಳೆಗೆ ಹಾರಲು ಹೋಗುತ್ತಿರುವೆ" ಎಂದು ಪಂಪಕವಿ ತರ್ಕಬದ್ಧವಾಗಿ ನುಡಿದನು.

"ಮಾವ ,ನನ್ನ ಸೇವೆ ಯಾರಿಗೆ ಬೇಕಾಗಿದೆ ?" ಎಂದು ಅತ್ತಿಮಬ್ಬೆ ನಿರಶಳಾಗಿ ನುಡಿದಳು.

"ಅಬ್ಬೆ, ಆದಿದೇವ ಸನ್ಯಾಸಿಯಾದುದನ್ನು ನೀನು ಓದಿರುವೆ. ಆಗ ಯಶಸ್ವತಿ ಮತ್ತು ಸುನಂದೆ ಗಂಡನಿದ್ದೂ ವಿಧವೆಯಾದರಲ್ಲ ! ಆ ಮೂಕಪೆಟ್ಟನು ಅವರಿಬ್ಬರೂ ಬಹುಕಾಲ ಸಹಿಸಿದರು. ಅಷ್ಟೇ ಅಲ್ಲ ತಮ್ಮ ಮಕ್ಕಳ ಶ್ರೇಯಸ್ಸಿಗಾಗಿ ಹಗಲು ರತ್ರಿ ಅವರು ಹೆಣಗಾಡಿದರು. ಗಂಡ ಸನ್ಯಾಸಿಯಾದನೆಂದು ಅವರೂ ಮುಳಿದು ಮಕ್ಕಳನ್ನು ಕಾಡುಪಾಲು ಮಡಲಿಲ್ಲವಲ್ಲ !ಏಳು ನನ್ನಪ್ಪ

,ಅಣ್ಣಿಗನನ್ನು ನೋಡಿಕೊಂಡು ಗಂಡನ ಸಾವನ್ನು ಮರೆಯಬೇಕು . ನೀನು ಮಾಡಬೇಕಾಗಿರುವ ದೇಶಸೇವೆ ಅಪಾರವಗಿದೆ.”

“ಮಾವ, ನಾನು ಏನು ಮಾಡಬಲ್ಲೆ ?”

“ಹಾಗನ್ನಬಾರದು. ಕನ್ನಡ ಸಾಹಿತ್ಯ ನಿನ್ನಿಂದ ಬದುಕಿ ಬೆಳಕಿಗೆ ಬರಬೇಕಾಗಿದೆ.”

“ನಾನೇನು ಕವಿಯೆ ಮಾವ ?ನಾನು ಬರೆಯಲಾದೀತೆ ?”

“ಅತ್ತಿಮಬ್ಬೆ, ಕವಿಗಳು ಬದುಕಬೇಕಾದರೂ ನಿನ್ನಂಥ ಕಲ್ಪತರುಬೇಡವೆ ? ಸಾಹಿತ್ಯ ಉಳಿಯಬೇಕಾದರೆ ಕಾಲಕಾಲಕ್ಕೆ ಪ್ರತಿ ಮಾಡಿಸಬೇಕಲ್ಲ ! ಸ್ತ್ರೀಯರು ಮನಸ್ಸು ಮಾಡಿದರೆ ಸಾಹಿತ್ಯ ಸಂರಕ್ಷಕರಾಗಿ ರಾರಾಜಿಸಬಹುದು. ಕವಿಯಷ್ಟೇ ಹಿರಿಯರು ನಿನ್ನಂಥ ಪ್ರಕಾಶಕರೂ ಕೂಡ. ಏಳು ಕಂದ ! ಜೈನ ಸಾಹಿತ್ಯ ಹಾಗೂ ಆಗಮಗಳನ್ನು ಸಹಸ್ರ ಸಹಸ್ರ ಪ್ರತಿ ಮಾಡಿಸಿ ನಾಡಿನ ಮೂಲೆ ಮೂಲೆಗೆ ಹಂಚುವ ಕಾರ್ಯವನ್ನು ನೀನು ವಹಿಸಿಕೋ. ಇದರ ಜೊತೆಗೆ ಎಲ್ಲೆಲ್ಲಿ ಜಿನಾಲಯಗಳ ಆವಶ್ಯಕತೆ ಯಿಡೆಯೋ ಅಲ್ಲೆಲ್ಲ ಜಿನಾಲಯಗಳ ನಿರ್ಮಾಣವಾಗಬೇಕು. ನಿನ್ನಂಥ ದಾನಚಿಂತಾಮಣಿ ಮುನ್ನುಗ್ಗಿ ನಮ್ಮ ಸಂಸತ್ಕೃತಿಯನ್ನೂ ಸಾಹಿತ್ಯವನ್ನೂ ನಮ್ಮ ಧರ್ಮವನ್ನೂ ನಮ್ಮ ಆಗಮವನ್ನೂ ಉಳಿಸ ಬೇಕಾಗಿದೆ.” ಎಂದು ಪಂಪಕವಿ ಆಕೆಯ ಮನದಲ್ಲಿ ಕಾರ್ಯತತ್ಪರತೆಯನ್ನು ತುಂಬಿದನು.

*　　　*　　　*　　　*

ಚಾಲುಕ್ಯರ ಎರಡನೇ ತೈಲಪ ರಾಷ್ಟ್ರ ಕೂಟರನ್ನು ಗೆದ್ದು ವಿಸ್ತಾರವಾದ ಸಾಮ್ರಾಜ್ಯಕ್ಕೆ ಸಾರ್ವಭೌಮನಾದನು. ಈತನ ಮಗ ಇರಿವಬೆಡಂಗ ಯುವರಾಜನಾದನು. ಈ ಪಟ್ಟಾಭಿಷೇಕ ಮಹೋತ್ಸವ ಕಾಲದಲ್ಲಿ ಅತ್ತಿಮಬ್ಬೆಯ ಕೂಸಾದ ಅಣ್ಣಿಗನನ್ನು ಲಕ್ಕುಂಡಿ ಮತ್ತು ಮಾಸವಾಡಿ ನರನಲ್ವತ್ತಕ್ಕೆ ರಾಜಿನೆಂದು ಸಾರ್ವಭೌಮನೇ ಸಾರಿ ಹಸುಗೂಸಿಗೆ ಪಟ್ಟಕಟ್ಟಿದನು. ಇದರ ಜೊತೆಗೆ ಸರ್ವಸೇನಾಧಿಪತಿಯೆಂದು ಮನ್ನಿಸಿ ನಾಗದೇವನಿಗೆ ದೊರೆಯುತ್ತಿದ್ದ ಮಾನಸನ್ಮಾನಗಳನ್ನೆಲ್ಲ ಅಣ್ಣಿಗನಿಗೆ ಕೊಡುವಂತೆ ಏರ್ಪಾಡಾಯಿತು. ತನ್ನ ಮಗನ ವೈಭವವನ್ನು ಕಂಡು ಅತ್ತಿಮಬ್ಬೆ ಹಿಗ್ಗಿದಳು. ಆಕೆಯ ನಂಟರುನಿಷ್ಟರೆಲ್ಲ ಅತ್ತಿಮಬೆಯ ಮನಕ್ಕೆ ಹಿತವಾಗುವಂತೆ ಮಾತಾಡಿ ಆಕೆಯಲ್ಲಿ ಮತ್ತೆ ಉತ್ಸಾಹ ತುಂಬಲು ಹೆಣಗಾಡಿದರು.

"ಅತ್ತಿ, ನಿನ್ನ ಮಗ ಎಂಥ ಅದೃಷ್ಟವಂತನಮ್ಮ !" ಎಂದು ಪದ್ಮಬ್ಬೆ ತನ್ನ ಮೊಮ್ಮಗನಿಗೆ ದೃಷ್ಟಿತೆಗೆಯುತ್ತ ನುಡಿದಳು.

"ಎಲ್ಲ ವೈಭವಗಳೂ ಕಾಮನ ಬಿಲ್ಲಿನಂತೆ ಮೋಹಕವಾಗಿ ಕಾಣುವುವು. ನಾವು ನೋಡುತ್ತ ಆ ಮನಮೋಹಕ ದೃಶ್ಯದಲ್ಲಿ ತನ್ಮಯರಾಗಿರುವಾಗಲೇ ವಿಧಿ ಪಕ್ಕನೆ ಧಾವಿಸಿ ಆ ದೃಶ್ಯವನ್ನು ಇತ್ತೊ ಇಲ್ಲವೋ ಎನ್ನುವಂತೆ ತೊತ್ತಳ ತುಳಿದು ಬಿಡುವುದಲ್ಲ!" ಎಂದು ಅತ್ತಿಮಬ್ಬೆ ತನ್ನ ಸ್ವಾನುಭವವನ್ನು ಬಿತ್ತರಿಸಿದಳು.

"ಬಂದಾಗ ಹಿಗಬೇಕು ಅತ್ತಿ.ನಮ್ಮ ಅಣ್ಣಿಗೆ ರಾಜನಾಗಿರುವುದು ಸುಳ್ಳಲ್ಲವಲ್ಲ ! ನಾವು ಧರ್ಮಪರಾಯಣರಾಗಿವವರೆಗೂ ನಮ್ಮ ರಾಜ್ಯಕ್ಕೇನು ಭಯವಿಲ್ಲವಲ್ಲ !" ಎಂದು ಪದ್ಮಬ್ಬೆ ತನ್ನ ದೃಷ್ಟಿಕೋನವನ್ನು ಮಂಡಿಸಿದಳು.

"ಅದೂ ನೀನು ಹೇಳಿದ್ದಕ್ಕೆ ನಾವರೂ ಪ್ರತಿ ಹೇಳುವುದಿಲ್ಲ. ನಗುನಗುತ್ತ ಇದ್ದು ಬಿಡು ನನ್ನ ಕಂದ" ಎಂದು ಪದ್ಮಬ್ಬೆ ಸೊಸೆಯ ಪ್ರಯಾಣಕ್ಕೆ ಒಪ್ಪಿದಳು.

ಅತ್ತಿಮಬ್ಬೆ ತನ್ನ ಮಗನ ರಾಜ್ಯವನ್ನು ಸಂದರ್ಶಿಸಿದಳು. ಊರೂರಲ್ಲು ರಾಜೋಚಿತವಾದ ಏರ್ಪಾಟಾಯಿತು. ಆ ಪ್ರಾಂತಕ್ಕೆ ರಾಜನಾದ ಅಣ್ಣಿಗನೂ ತಾಯಜೊತೆಯಲ್ಲೇ ಇದ್ದನು. ಯಾವೊಂದು ಹಳ್ಳಿಯನ್ನೂ ಬಿಡದೆ ಅತ್ತಿಮಬ್ಬೆ ಸುತ್ತಾಡಿದಳು. ಎಲ್ಲಿಗೆ ದೇಗುಲ ಬೇಕು, ಎಲ್ಲಿಗೆ ಕುಡಿಯುವ ನೀರಿನ ಬಾವಿಬೇಕು, ಎಲ್ಲಿಗೆ ಛತ್ರ ಬೇಕು ಎಲ್ಲವನ್ನೂ ಕೇಳಿ ತಿಳಿದುಕೊಂಡಳು. ಜನತೆ ಕೇಳಿದ್ದಕ್ಕೆ ಇಲ್ಲವೆನ್ನದೆ ತಕ್ಷಣ ಮಾಡಿ ಕೊಡುವುದಾಗಿ ಭರವಸೆಯಿತ್ತಳು. ಜನತೆ ರಾಜಭಕ್ತಿಯಿಂದ ಕಾಡು ಮೇಡನ್ನೆಲ್ಲ ವ್ಯವಸಾಯಕ್ಕೆ ತರಬೇಕೆಂದು ಬಡಬಗ್ಗರಿಗೆ ಭೂಮಿ ಹಂಚಿದಳು. ದನಕರುಗಳನ್ನು ಕೊಡಿಸಿದಳು.

ಲಕ್ಕುಂಡಿ ರಾಜಧಾನಿಯಾಗಲು ಯೋಗ್ಯವಾಗಿದೆಯೆಂದು ನಿರ್ಧರಿಸಿ ಅದಕ್ಕೆ ಬೇಕಾದ ವ್ಯವಸ್ಥೆ ಮಾಡಬೇಕೆಂದು ಅತ್ತಿಮಬ್ಬೆ ಯೋಚಿಸಿ ಮೊಟ್ಟಮೊದಲು ಜಿನಾಲಯಕ್ಕೆ ಪಾಯಹಾಕಿದಳು. ಲಕ್ಷಾಂತರ ಹೊನ್ನನ್ನು ವ್ಯಯವಾಡಿ ಭವ್ಯವಾದ ದೇಗುಲವನ್ನು ಕಟ್ಟಿಸಬೇಕೆಂದು ಆಶಿಸಿದಳು. ಅನಂತರ ಅಣ್ಣಿಗನಿಗಾಗಿ ಅರಮನೆ ನಿರ್ಮಾಣ ವಾಗಬೇಕೆಂದು ಸಂಕಲ್ಪ ಮಾಡಿದಳು.

ಒಮ್ಮೆ ರನ್ನ ಪಾಡು ಹೀಗಾಯಿತು. ನಿನ್ನನ್ನು ಕವಿಚಕ್ರವರ್ತಿಯೆನಿಸಬೇಕೆಂದು ಹಂಬಲದಲ್ಲೇ ನಮ್ಮವರು ಕಣ್ಮುಚ್ಚಿದರು. ಅವರ ಆಶೆಯು ನೆರವೇರಬೆಕು"ಎಂದು ಅತ್ತಿಮಬ್ಬೆ ಕಂಬನಿ ಸುರಿಸಿದಳು.

"ಅಮ್ಮಾ, ತಾವು ಗಂಡನನ್ನು ಕಳೆದುಕೊಂಡು ಗೋಳಾಡುವುದನ್ನು ನೋಡುವು ದಕ್ಕಾಗೇ ನಾನು ಬಂದಂತಾಯಿತು.ಕವಿಚಕ್ರವರ್ತೀ ಆದರೆಷ್ಟು ಹೋದರೆಷ್ಟು .ಚಕ್ರವರ್ತಿಗಳನ್ನು ಸೃಷ್ಟಿಸವಂಥ ಆ ನನ್ನ ತಂದೆ ಕಣ್ಮುಚ್ಚಿದ ಮೇಲೆ ನನಗೆ ಯಾವುದೂ ಬೇಡವಾಗಿದೆ" ಎಂದು ರನ್ನ ಸಂಕಟದಿಂದ ನುಡಿದನು.

"ಮಗು, ಅವರಿದ್ದಿದ್ದರೆ ನಿನ್ನ ಪ್ರತಿಭೆಯನ್ನೂ ಪಾಂಡಿತ್ಯವನ್ನೂ ಕಂಡು ಎಷ್ಟು ಆನಂದ ಪಡುತ್ತಿದ್ದರೋ ಏನೋ !ತೈಲಪ ಚಕ್ರವರ್ತಿಯ ಬಳಿಗೆ ನಿನ್ನನ್ನು ಕರೆದು ಕೊಂಡು ಹೋಗಿ ಸನ್ಮಾನ ಮಾಡಿಸದೆ ಬಿಡುತ್ತಿರಲಿಲ್ಲ " ಎಂದು ಅತ್ತಿಮಬ್ಬೆ ನಿಸ್ಸ ಹಾಯಕಳಾಗಿ ನುಡಿದಳು.

"ಅಮ್ಮ, ಅಂಥವರೇ ಹೋದ ಮೇಲೆ ಮಾನ ಸನ್ಮಾನ ಕಟ್ಟಿಕೊಂಡು ನನಗೇ ನಾಗಬೇಕು ?"

"ಮಗು, ನಿರಾಶನಾಗಬಾರದು. ಅವರೇನೋ ಹೋದರು. ಆದರೆ ಅವರ ಗುರಿಯನ್ನು ಬದುಕಿರುವ ನಾವು ಸಾಧಿಸಾಬೇಕು. ನೀನು ಕವಿಚಕ್ರವರ್ತೀಯಾದಾಗಲೇ ನನ್ನ ಪ್ರಿಯತಮನ ಆತ್ಮಕ್ಕೆ ನಿಜವಾದ ತೃಪ್ತಿ ! ಏನಾದರೂ ಬರೆಯುತ್ತಿರುವೆಯ ಮಗು ?"

"ಇನ್ನೂ ಬರೆದಿಲ್ಲ. ಮುಂದೆ ಬರೆಯುವ ಯೋಚನೆಯಿದೆ."

" ದೇವರ ಮೇಲೆ ಭಾರ ಹಾಕಿ ಬರೆದುಬಿಡು .ಮಾವಾಜಿಗೆ ಹೇಳಿ ನಿನ್ನನ್ನು ಚಕ್ರವರ್ತೀಯ ಬಳಿಗೆ ಕಳಿಸಿಕೊಡುವೆನು."

"ಈಗ ನಾನು ತಮ್ಮಲ್ಲಿ ಒಂದು ಮಾತು ಕೇಳಬೇಕಾಗಿದೆ."

"ಏನು ಬೇಕಾಗಿತ್ತು ಮಗು. ನನಗೆ ಅಣ್ಣಿಗೆ ಬೇರೆ ಅಲ್ಲ, ನೀನು ಬೇರೆ ಅಲ್ಲ, ಏನು ಬೇಕೋ ಹೇಳು. ದುಡ್ಡುಕಾಸಿನ ತಾಪತ್ರಯವಿದ್ದರೆ ಎಷ್ಟು ಬೇಕೋ ತೆಗೆದುಕೋ" ಎಂದು ಅತ್ತಿಮಬ್ಬೆ ಕೀಲಿಕೈಯನ್ನು ಅವನ ಕಡೆ ಎಸೆದಳು.

"ಅಮ್ಮ, ದುಡ್ಡಿಗೋಸ್ಕರ ನಾನು ಇಷ್ಟುದೂರ ಬರಬೇಕೆ ?ತಮ್ಮ ಹೆಸರು ಹೇಳಿ ಕರ್ಣಾಟಕದಲ್ಲಿ ಎಲ್ಲಿ ಬೇಕಾದರೂ ಲಕ್ಷಾಂತರ ಹೊನ್ನು ತರಲಾರೆನೇ ? ಮೊನ್ನೆ ಬಂಕಾಪುರಕ್ಕೆ ಚಾಮುಂಡರಾಯರು

ಬಂದಿದ್ದರು. ಈಚಿನ ರಾಜಕೀಯವನ್ನೆಲ್ಲ ಅವರೇ ಹೇಳಿದ್ದು ,ರಾಷ್ಟ್ರಕೂಟರ ಪತನ ಹಾಗೂ ಅಪ್ಪಾಜಿಯ ಸಾವು ಇವೆರಡನ್ನೂ ಹೇಳುತ್ತರಾಯರು ಕಂಬನಿ ಮಿಡಿದರು ! ಅಜಿತಸೇನರೂ ಮಕ್ಕಳಂತೆ ಅತ್ತುಬಿಟ್ಟರು. ತಮಗೆ ಒಂದು ಮಾತನ್ನು ತಿಳಿಸಬೇಕೆಂದು ಅಜಿತಸೇನರು ನನ್ನನ್ನು ಕಳಿಸಿರುವರು.''

''ಆಚಾರ್ಯರ ಮಾತನ್ನು ಖಂಡಿತ ನಾನು ನಡೆಸಿಕೊಡವನು. ನನ್ನಿಂದಲೂ ಅಪಚಾರವಾಗಿದೆ ಮಗು'' ಎಂದು ಅತ್ತಿಮಬ್ಬೆ ತಪ್ಪಿತಸ್ಥಳಂತೆ ತಡವರಿಸಿದಳು.

''ಅಮ್ಮಾ, ತಪ್ಪು ಯಾರದೋ ಏನೋ ಆ ಮಾತು ಮರೆತು ಬಿಡಿ. ಆಗಿದ್ದು ಆಗಿ ಹೋಯಿತು. ಈಗ ಜೈನಧರ್ಮ, ಜೈನಸಂಸ್ಕೃತಿ, ಜೈಮಸಾಹಿತ್ಯ ಇವು ಅನಾಥವಾಗ ಬಾರದು. ಇವು ಸಾಮಾಜಿಕ ರತ್ನತ್ರಯ ! ಇವನ್ನೆಲ್ಲ ತಾವು ಪೋಷಿಸಿಕೊಂಡು ಬಂದು ರಾಷ್ಟ್ರಕೂಟರ ಪತನದಿಂದ ನಮ್ಮ ಸಮಾಜಕ್ಕಾದ ನಷ್ಟವನ್ನು ತುಂಬಿಕೊಡಬೇಕು. ಅಜಿತಸೇನಾಚಾರ್ಯರು. ಈ ಮಾತನ್ನು ತಮಗೆ ತಿಳಿಸಬೇಕೆಂದು ನನ್ನನ್ನು ಕಳುಹಿಸಿ ಕೊಟ್ಟಿರುವರು'' ಎಂದು ರನ್ನಸಂಕಟಗೊಂಡು ನುಡಿದನು.

''ಮಗು, ನನ್ನ ಮೇಲೆ ಎಂಥ ಬಾರ ಹೊರಿಸುತ್ತಿರುವಿರಿ ! ಅದೂ ವಿಧವೆಯ ಮೇಲೆ ಇಷ್ಟೊಂದು ಭಾರವೆ ? ಈಗ ಅವರೂ ಇದ್ದಿದ್ದರೆ ಹಿಂದು ಮುಂದು ನೋಡದೆ ಆಗಲಿ ಎಂದು ಮಾತು ಕೊಡುತ್ತಿದ್ದೆ .ನಾನೇ ಅನಾಥಳು ! ನನ್ನಿಂದ ಧರ್ಮರಕ್ಷಣೆಯೇ ? ನನ್ನಿಂದ ಸಂಸ್ಕೃತಿ ಪೋಷಣೆಯೇ ? ನಾನು ಹೇಳಿ ಕೇಳಿ ಸಾಮಾನ್ಯ ಹೆಣ್ಣು ,ಇದರ ಮೇಲೆ ಗಂಡನಿಲ್ಲದೆ ದಿಕ್ಕೆಟ್ಟವಳು ! ಕವಿಗಳನ್ನು ಕೈಹಿಡಿದು ಮೇಲೆತ್ತ ಬಲ್ಲೆನೆ ? ಅಪಾರವಾದ ಜೈನ ಸಾಹಿತ್ಯವನ್ನು ನಾನು ಪುನರುತ್ಥಾನ ಮಾಡಲಾದೀತೆ ? ಒಟ್ಟಿನಲ್ಲಿ ರಾಷ್ಟ್ರಕೂಟ ಸಾರ್ವಭೌಮ ಮಾಡಬಹುದಾದುದನ್ನೆಲ್ಲ ಈ ಬಡ ಹೆಂಗಸಿನ ಮೇಲೆ ಹೇರುವುದೇ ?'' ಎಂದು ಅತ್ತಿಮಬ್ಬೆ ಆಕಾಶವೇ ಕಳಚಿ ಬಿದ್ದವಳಂತೆ ಗೋಳಾಡಿದಳು.

'' ಅಮ್ಮ, ಈಗ ಈ ಭಾರವನ್ನೆಲ್ಲ ತಾವೇ ಹೊರಬೇಕು. ರಾಷ್ಟ್ರಕೂಟರು ನಿರ್ನಾಮ ವದರೂ ಜೈನಸಂಸ್ಕೃತಿ ನಿರ್ನಾಮವಾಗಲಿಲ್ಲ ಎನ್ನಿಸಬೇಕಾದರೆ ತಾವು ಕಂಕಣಕಟ್ಟಿ ನಿಲ್ಲಬೇಕು. ಇಲ್ಲದಿದ್ದರೆ ಜೈನಸಮಾಜ ಈಗ ಹೇಳಹೆಸರಿಲ್ಲ ದಂತಾಗುವುದು.''

“ರನ್ನ ,ನೀನೂ ಹೀಗೆ ಹೇಳಬಹುದೇ ಕಂದ. ನನ್ನ ಯೋಗ್ಯತೆಯೇನು ? ನಾನೊಬ್ಬಳು ಎಷ್ಟು ಮಾಡಬಲ್ಲೆ ? ಸಾಮ್ರಾಜ್ಯದ ಕಾರ್ಯವನ್ನು ಬಡಹೆಂಗಸಾದ ನಾನು ಮಾಡಲಾದೀತೆ ?ಸುಮ್ಮನೆ ಹೂಗುಟ್ಟಿ ನಗೆಪಾಟಲು ಮಾಡಲೆ?” ಎಂದು ಅತ್ತಿಮಬ್ಬೆ ತಲೆಯಮೇಲೆ ಕೈಹೊತ್ತು ಕುಳಿತಳು.

“ಅಮ್ಮಾಜಿ, ತಮ್ಮಿಂದ ಜೈನಸಮಾಜಕ್ಕೆ ಧೈರ್ಯ ಬರಬೇಕಾಗಿದೆ. ಸದಾ ರಾಜರನ್ನೇ ನಂಬಿ ನಾವು ಕೂರಬಾರದು. ಜನಾಂಗ ಮನಸ್ಸು ಮಾಡಿದರೆ ರಾಜರಿಗಿಂತ ಮಿಗಿಲಾಗಿ ಸಾದಿಸಬಹುದು ಎಂಬುದನ್ನು ತಾವು ಮಾಡಿ ತೋರಿಸಬೇಕು. ನಾಡಿನ ಮಹಿಳಾ ಸಮಾಜಕ್ಕೆ ತಾವು ಕಿರೀಟಪ್ರಾಯರಾಗಿ ರಾರಾಜಿಸಬೇಕು. ಆಚಾರ್ಯರಿಗೆ ನಾನೇ ತಮ್ಮ ಪರವಾಗಿ ಮಾತುಕೊಟ್ಟು ಬಂದಿರುವನು.”

“ರನ್ನ, ಹೇಳದೆ ಕೇಳದೆ ಮಾತು ಕೊಟ್ಟೇನಪ್ಪ ! ನನ್ನ ಶಕ್ತಿಸಾಮರ್ಥ್ಯ ನಿನಗೆ ತಿಳಿಯದೆ ? ಬಬ್ಬರು ಎಷ್ಟು ಮಾಡಬಹುದು ?”

“ಅಮ್ಮಾಜಿ, ತಾವು ಮನಸ್ಸುಮಾಡಿದರೆ ನೂರು ಜನ ಸಾಮ್ರಾಟರು ಸಾಧಿಸುವುದನ್ನು ಸಾಧಿಸಬಲ್ಲಿರಿ .”

“ರನ್ನ ,ಕವಿಗಳಿಗೆ ವ್ಯವಹಾರಜ್ಞಾನ ಕಡಿಮೆಯೆಂದು ನಮ್ಮ ಅಜ್ಜ ಹೇಳುತ್ತಿದ್ದರು. ನಿನ್ನ ಮಾತನ್ನು ಕೇಳಿದರೆ ಅದು ನಿಜವೊ ಏನೋ ಅನಿಸುವುದು. ಬಬ್ಬ ಬಡಹೆಂಗಸು ಸಾಮ್ರಾಟರಿಗೆ ಸರಿಸಾಟಿಯಾಗಿ ನಿಂತಾಳೆ ?”

“ಅಮ್ಮಾಜಿ, ಮಾಡಬೇಕಾಗಿರುವುದು ಸಾಂಸ್ಕೃತಿಕ ಕಾರ್ಯಗಳನ್ನು. ಅಹಿಂಸಾ ಮೂರ್ತಿಗಳು ರಾರಾಜಿಸುವ ಜಿನಾಲಯಗಳ ಜೀರ್ಣೋದ್ಧಾರ ತಮ್ಮಿಂದಾಗಬೇಕು. ಅಹಿಂಸಾ ಸಾಹಿತ್ಮ ಪ್ರಕಾಶನಕ್ಕೆ ತಾವು ಟೊಂಕಕಟ್ಟಬೇಕು. ಅಜಿತ ಸೇನಾಚಾರ್ಯರು ಕಂಬನಿಮುಡಿದು ಹೇಳಿಕಳಿಸಿರುವರು !”

“ಮಗು ,ಆಚಾರ್ಯರು ತಪಸ್ವಿಗಳು. ಅಂಥವರು ನನ್ನಂತೆ ಅಳಬಹುದೆ ? ರಾಷ್ಟ್ರಕೂಟರ ಸಮ್ರಾಜ್ಯದಿಂದ ನಮ್ಮ ಸಮಾಜಕ್ಕೆ ಆಗುತ್ತಿದ್ದುದನ್ನೆಲ್ಲ ಸಾಧಿಸುವೆನೆಂದು ಜಂಬಕೊಚ್ಚಲಾರೆ. ನನ್ನ ಜೀವಿತದ ಪ್ರತಿಕ್ಷಣವನ್ನೂ ಸಂಸ್ಕೃತಿಗಾಗಿ ಮೀಸಲಾಗಿಡುವೆ. ನನ್ನ ಬಳಿ ಇರುವ ಸಂಪತ್ತನ್ನೆಲ್ಲ ಈ ಮಹತ್ಕಾರ್ಯಕ್ಕಾಗಿ ವಿನಿಯೋಗಿಸುವೆ. ಆಚಾರ್ಯರಿಗೆ ಈ ಮಾತನ್ನು ತಿಳಿಸು.”

“ಅಮ್ಮ , ವೈಯಕ್ತಿಕವಾಗಿ ನನ್ನ ಪ್ರಾರ್ಥನೆ ಒಂದಿದೆ. ಅದನ್ನೂ ನೆರವೇರಿಸಿಕೊಡ ಬೇಕು” ಎಂದು ರನ್ನ ದೈನ್ಯನಾಗಿ ನುಡಿದನು.

“ರನ್ನ, ನೀನು ನನ್ನ ಮೊದಲನೇ ಮಗು. ನಿನ್ನ ಶ್ರೇಯಸ್ಸು ಮೊದಲು ಅನಂತರ ಅಣ್ಣಿಗನ ಶ್ರೇಯಸ್ಸು. ಜಿನಾನು ದೇವರ ಪಾದಕ್ಕೆ ಅರ್ಪಿಸುವ ಹೂಗಳಲ್ಲಿ ಮೊದಲನೆಯ ಹೂವೇ ನಿನಗಾಗಿ ! ಏನು ಬೇಕೋ ಕೇಳು” ಎಂದು ವರದಸ್ತವನ್ನು ನೀಡಿದ ದೇವತೆಯಂತೆ ಭರವಸೆಕೊಟ್ಟಳು.

“ಅಮ್ಮಾಜಿ, ನನ್ನನ್ನು ಚಾಮುಂಡರಾಯರು ಪ್ರೀತಿಯಿಂದ ಕರೆಯುತ್ತಿರುವರು. ತಾವು ಅನುಮತಿ ಕೊಟ್ಟರೆ ಅವರ ಆಶ್ರಯಕ್ಕೆ ಹೋಗುವೆನು” ಎಂದು ರನ್ನ ಮಗುವಿನಂತೆ ಕೇಳಿದನು.

“ರನ್ನ ,ನಿನಗೆ ನಾನಿರುವ ತನಕ ಯಾರ ಅಶ್ರಯವೂ ಬೇಡ. ಯಾರ ಹಂಗೂ ಬೇಡ. ನೀನು ನನ್ನ ಜ್ಯೇಷ್ಠ ಪುತ್ರ ! ಏನು ಬೇಕೋ ನಾನೇ ಕೊಡುವೆನು.”

“ಅಮ್ಮಾಜಿ, ತಮ್ಮಲ್ಲಿ ಅಪನಂಬಿಕೆಯಿಟ್ಟು ನಾನು ಚಾಮುಂಡರಾಯರನ್ನು ಹಿಂಬಾಲಿಸುತ್ತಿಲ್ಲ. ಮಹಾಪುರುಷರು ಕರೆದರು .ಅವರ ಮಾತನ್ನು ತೆಗೆದು ಹಾಕ ಬಾರದೆಂದು ಅನುಮತಿ ಕೇಳಲು ಬಂದಿರುವೆನು.”

“ರನ್ನ ನಿನಗೂ ಅಲ್ಲಿ ಹೋಗಲು ಇಷ್ಟವಿದ್ದರೆ ನನ್ನದೇನೂ ಅಭ್ಯಂತರವಿಲ್ಲ .ಆದರೆ ದಿಕ್ಕೆಟ್ಟವನಂತೆ ಮಾತ್ರ ಹೋಗಬೇಡ. ನಾನಿರುವ ತನಕ ನೀನು ರಾಜಕುಮಾರನಂತೆ ಇರು!”

“ಅಮ್ಮಾಜಿ, ತಮ್ಮಲ್ಲಿ ನನಗೆ ಅಪನಂಬಿಕೆಯೆ ? ತಾವಿಲ್ಲದೇಹೋಗಿದ್ದರೆ ನಾನು ಮನುಷ್ಯನಾಗುತ್ತಿದ್ದೆನೇ ? ಎಲ್ಲೋ ಕೊಳೆಯಬೇಕಾಗಿತ್ತು. ತಮ್ಮಿಂದ ನಾನು ವಿದ್ಯಾವಂತನಾದೆ. ಚಾಮುಂಡರಾಯರಂಥ ಮಹಾಪುರುಷರೂ ನನ್ನನ್ನು ಮೆಚ್ಚಿ ಆಹ್ವಾನಿಸುವಂತಾಯಿತು ! ನಾನು ಎಲ್ಲಿದ್ದರೂ ತಮ್ಮ ಕೂಸೆ !”

“ಮಗು ಹೋಗಿ ಬಾ. ಈ ಪ್ರಾಯದಲ್ಲಿ ಹತ್ತುಕಡೆ ಸುತ್ತಾಡುವ ಆಶೆಯೂ ಇರುತ್ತದೆ. ರಾಯರೂ ದೊಡ್ಡವರು. ಆದರೆ ಒಂದು ಮಾತು ನೆನಪಿರಲಿ. ಎಲ್ಲಿಯ ತನಕ ನಿನ್ನನ್ನು ಗೌರವದಿಂದ ನಡೆಸಿಕೊಳ್ಳುವರೋ ಅಲ್ಲಿಯ ತನಕ ಅಲ್ಲಿರು. ಆಮೇಲೆ ಅರೆಚಣವೂ ಅಲ್ಲಿದ್ದೀಯೆ !ನಿನಗಾಗಿ ನನ್ನ

ಮನ ಹಾಗು ನನ್ನ ಮನೆ ಎರಡೂ ಸದಾತೆರೆದಿರುತ್ತೆ ” ಎಂದುಅತ್ತಿಮಬ್ಬೆ ಕಂಬನಿಮಿಡಿದಳು. ರನ್ನ ಅಕೆಯ ಕಾಲಿಗೆ ಬಿದ್ದು ಪಾದಧೂಳಿಯನ್ನು ಕಣ್ಣಿಗೊತ್ತಿಕೊಂಡನು!

ಒಂದು ಮದುವೆ ಅಂತ ಆಗಿಬಿಡು .ಅನಂತರ ಎಲ್ಲಿಗೆ ಬೇಕಾದರೂ ಹೋಗುವೆಯಂತೆ” ಎಂದು ಅತ್ತಿಮಬ್ಬೆ ರನ್ನನ ಗಮನವನ್ನು ಮದುವೆಯ ಕಡೆ ಸೆಳೆದಳು.

ಈನೇಂದ್ರವಲ್ಲಭನ ತಂಗಿಗೆ ಅವಳಿಜವಳಿ ಹೆಣ್ಣುಮಕ್ಕಳಿದ್ದವು. ಹಿರಿಯವಳ ಹೆಸರು ಶಾಂತಿ, ಕಿರಿಯವಳು ಜಕ್ಕಿ. ಇವರ ಬಳಗದಲ್ಲಿ ಹೆಚ್ಚಿಗೆ ಓದಿದವನೆಂದರೆ ರನ್ನನೊಬ್ಬನೇ ! ಹೆಣ್ಣು ಮಕ್ಕಳ ತಂದೆ ಆದಿರಾಜು ಮಾಡಿಕೊಳ್ಳುವಂತಿದ್ದರೆ ಎರಡು ಹೆಣ್ಣುನ್ನೂ ಮಡಿಕೊಂಡುಬಿಡಿ ಎಂದು ಪಟ್ಟು ಹಿಡಿದನು. ಅತ್ತಿಮಬ್ಬೆಗೂ ಇದು ಒಪ್ಪಿಗೆಯಾಯಿತು. ವಿಜಯಪುರದಲ್ಲಿಯೇ ಹೆಣ್ಣುಗಳನ್ನು ಕರೆಸಿಕೊಂಡು ಶುಭಲಗ್ನದಲ್ಲಿ ಅತ್ತಿಮಬ್ಬೆ ವಿವಾಹವನ್ನು ನೆರವೇರಿಸಿದಳು. ರನ್ನನ ವಿವಾಹ ರಾಜಪುತ್ರನಿಗೆ ಆಗುವಂತೆ ವೈಭವವಾಗೇ ನೆರವೇರಿತು. ಅಡಕೆಯ ಗಿಡಕ್ಕೆ ಎರಡೂ ಕಡೆಯಿಂದ ಎಲೆಬಳ್ಳಿಗಳನ್ನು ಹಬ್ಬಿಸುವಂತೆ ಶಾಂತಿ ಜಕ್ಕಿ ಇಬ್ಬರೂ ರನ್ನನ ಮನೋವಲ್ಲಭೆಯ ರಾದರು ! ರನ್ನ ಇಬ್ಬರನ್ನೂ ಕಟ್ಟಿಕೊಂಡು ಚಾಮುಂಡರಾಯನ ಆಶ್ರಯಕ್ಕೆ ಹೋದನು.